ಸಿಸಿ ನಂ. **1006/2017,** ಪಿ.**ಡಬ್ಲ್ಯೂ:1**

**ದಿನಾಂಕ:03-09-2024** ರಂದು **ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಂದುವರೆದ ಪಾಟೀ ಸವಾಲು: **2** ನೇ ಆರೋಪಿ ಪರ ವಕೀಲರಿಂದ:

ಎನ್ ಆರ್ ಇ ಜಿ ಯೋಜನೆಯ ಪಾಸ್ ಪುಸ್ತಕಗಳ ವಿವರಗಳನ್ನು ಬರೆಯುವುದು ಅಂಚೆ ಪಾಲಕರ ಕರ್ತವ್ಯವಾಗಿರುತ್ತದೆ. ಫಲಾನುಭವಿಗಳು ಖಾತೆಯನ್ನು ತೆರೆಯುವುದು ಮತ್ತು ತಮ್ಮ ಸಹಿಯನ್ನು ಅಂಚೆ ಕಚೇರಿಯಲ್ಲಿ ನೀಡಬೇಕು. ಸದರಿ ಸಹಿಗಳನ್ನು ಗುರುತಿಸುವುದು ಗ್ರಾಮ ಪಂಚಾಯಿತಿಯ ಅಧಿಕಾರ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಬೇರೆಯಾರಾದರೂ ಗುರುತಿಸಬಹುದು ಎಂದು ನುಡಿಯುತ್ತಾರೆ. ಸದರಿ ವಿಷಯಗಳ ಕುರಿತು ನಮ್ಮ ಇಲಾಖೆಯ ನಿಯಮಗಳಿಗೆ ಅನುಸಾರವಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ.

2. ಉಳಿತಾಯ ಖಾತೆಯನ್ನು ಗ್ರಾಮ ಪಂಚಾಯಿತಿಯವರೇ ಕರೆ ತಂದು ನಮ್ಮ ಇಲಾಖೆಯಲ್ಲಿ ಖಾತೆಯನ್ನು ತೆರೆಯಬೇಕು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಫಲಾನುಭವಿಗಳನ್ನು ಕರೆ ತಂದು ಅರ್ಜಿ ತುಂಬಲು ಪಂಚಾಯಿತಿಯವರು ಸಹಕರಿಸಬಹುದು ಎಂದು ನುಡಿಯುತ್ತಾರೆ. ಫಿರ್ಯಾದಿ ನೀಡುವ ಪೂರ್ವದಲ್ಲಿ ಗ್ರಾಮ ಪಂಚಾಯಿತಿಯಿಂದ ಯಾವುದೇ ಸ್ಟೇಟ್ ಮೆಂಟ್ ಗಳನ್ನು ಪಡೆದಿರುವುದಿಲ್ಲ. ಜಿಲ್ಲಾ ಪಂಚಾಯಿತಿಯಿಂದ ಖಾತೆದಾರರಿಗೆ ಎಷ್ಟು ಹಣ ಜಮಾವಾಗಬೇಕು ಎಂದು ಮುಖ್ಯ ಅಂಚೆ ಕಚೇರಿಯ ಮೂಲಕ ಮಾಹಿತಿ ಬರತ್ತದೆ. ಫಿರ್ಯಾದಿಯ ಪೂರ್ವದಲ್ಲಿ ನಾನು ವೇಜ್ ಸ್ಲಿಪ್ ಗಳನ್ನು ನೋಡಿರುವುದಿಲ್ಲ.

3. 1 ಮತ್ತು 2 ನೇ ಆರೋಪಿಗಳು ಅಳವಂಡಿ ಮತ್ತು ಹಲವಾಗಲಿ ಗ್ರಾಮದ ಕಚೇರಿಯ ಕಾರ್ಯ ನಿರ್ವಹಿಸುತ್ತಿದ್ದರು. ಸದರಿ ದಾಖಲೆಗಳನ್ನು ಪೋಲಿಸರಿಗೆ ನೀಡಿರುವ ಬಗ್ಗೆ ನನಗೆ ನೆನಪಿಲ್ಲ. ಫಲಾನುಭವಿಗಳಿಗೆ ಹಣ ಪಾವತಿಯಾದ ದಿನವೇ ಮಾಹಿತಿಯನ್ನು ಮುಖ್ಯ ಅಂಚೇ ಕಚೇರಿಗೆ ನೀಡಲಾಗುತ್ತದೆ. ಈ ಪ್ರಕರಣದಲ್ಲಿ ಹಣ ಪಾವತಿಯಾದ ದಿನವೇ ನಮಗೆ ಮಾಹಿತಿ ಬಂದಿರುತ್ತದೆ. 2010 ನೇಸಾಲಿನಲ್ಲಿ ಸದರಿ ವಿಷಯವು ಮುಖ್ಯ ಕಚೇರಿಗೆ ಬಂದಿರುವ ಬಗ್ಗೆ ನಾನು ಖಚಿತಪಡಿಸಿ ಕೊಂಡಿರುತ್ತೇನೆ. 2010 ನೇ ಸಾಲಿನಲ್ಲಿ ಸದರಿ ವಿಷಯದ ಕುರಿತು ಲೆಕ್ಕಪರಿಶೋಧನೆ ಮಾಡಿರುವುದಿಲ್ಲ. ಅ ಸಮಯದಲ್ಲಿ 2010 ನೇ ಸಾಲಿನಲ್ಲಿ ಮುಖ್ಯ ಕಚೇರಿಯ ಕಾರ್ಯ ನಿರ್ವಹಿಸುತ್ತಿದ್ದ ಅಧಿಕಾರಿಯ ಹೆಸರು ನನಗೆ ಗೊತ್ತಿಲ್ಲ. ಸದರಿ ಆಧಿಕಾರಿಯ 2010 ನೇ ಸಾಲಿನಲ್ಲಿ ವರದಿ ನಿಡದ ಕುರಿತು ನಾನು ಅಂಚೆ ಅಧೀಕ್ಷಕರು ಗದಗ ರವರಿಗೆ ತಿಳಿಸಿರುತ್ತೇನೆ. ಸದರಿ ವರದಿಯನ್ನು ಪೋಲಿಸರಿಗೆ ನೀಡಿರುವುದಿಲ್ಲ.

4. ನನ್ನ ವರದಿಯಲ್ಲಿ ನಿಪಿ-3 ರ ದೂರಿನಲ್ಲಿ ಹೇಳಿರುವ ಫಲಾನುಭವಿಗಳ ಕುರಿತು ಮಾತ್ರ ನನ್ನ ವರದಿಯನ್ನು ನೀಡಿರುತ್ತೇನೆ. ಫಲಾನುಭವಿಗಳು ನನಗೆ, ಅಂಚೆ ಇಲಾಖೆಗೆ ಅಥವಾ ಪೋಲಿಸ್ ಇಲಾಖೆಗೆ ಯಾವುದೇ ದೂರನ್ನು ನೀಡಿರುವುದಿಲ್ಲ. ಆದರೇ ಅವರುಗಳಿಗೆ ಹಣ ಮುಟ್ಟಿರುವ ಕುರಿತು ವಿಚಾರಿಸಿರುತ್ತೇನೆ. ನಿಪಿ-1 ಮತ್ತು 2 ರ ಮೂಲಕ ಸದರಿ ವಿಷಯಗಳ ಕುರಿತು ತಿಳಿದಿರುತ್ತದೆ ಎಂದರೆ ಸರಿ. ನಮ್ಮ ಇಲಾಖೆಯಲ್ಲಿ ನಡೆದ ಲೆಕ್ಕ ಪರಿಶೋಧನೆಯ ದೋಷವನ್ನು ಮುಚ್ಚಿಡಲು ಆರೋಪಿಗಳ ವಿರುದ್ಧ ಈ ಪ್ರಕರಣ ದಾಖಲಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-1 ರಂತೆ ಗದಗ ಅಧೀಕ್ಷಕರು ತಿಳಿಸಿದ ಕಚೇರಿಗಳ ಖಾತೆಗಳನ್ನುಮಾತ್ರ ವಿಚಾರಿಸಿರುತ್ತೇವೆ ಎಂದರೆ ಸರಿ. ಸದರಿ ಎರಡು ಅಂಚೆ ಕಚೇರಿಯಲ್ಲಿ ಒಟ್ಟು ಎಷ್ಟು ಖಾತೆಗಳು ಇರುತ್ತವೆ ಎಂದು ನನಗೆ ಗೊತ್ತಿಲ್ಲ.

5. ನನ್ನ ವರದಿಯಲ್ಲಿ ಎಷ್ಟು ಖಾತೆಗಳನ್ನು ವಿಚಾರಿಸಿರುತ್ತೇನೆ ಎಂದು ತಿಳಿಸಿರುತ್ತೇನೆ. ಸದರಿ ಅಂಚೆ ಕಚೇರಿಗಳ ಎನ್ ಅರ್ ಇ ಜಿ ಯೋಜನೆಯ ಎಲ್ಲಾ ಖಾತೆಗಳನ್ನು ಪರಿಶೀಲಿಸಿರುತ್ತೇನೆ. ಚಾಸಾ 4 ರಿಂದ 12 ರವರ ಖಾತೆಗಳಿಗೆ ಕುರಿತು ಅಕ್ರಮದ ಬಗ್ಗೆ ಪೋಲಿಸ್ ದೂರನ್ನು ನೀಡುವಂತೆ ನಿಪಿ 2 ರಂತೆ ತಿಳಿಸಿರುತ್ತಾರೆ. ಆರೀತಿ ಯಾವುದೇ ಆದೇಶವಾಗಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಡ್ರಾಫ್ಟ ಫಿರ್ಯಾದಿಯಲ್ಲಿ ಅಬಗ್ಗೆ ತಿಳಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಡ್ರಾಫ್ಟ ಫಿರ್ಯಾದಿಯನ್ನು ಪೋಲಿಸರಿಗೆ ನೀಡಿರುವುದಿಲ್ಲ.

6. ನಾನು ಮುಖ್ಯ ಕಚೇರಿಯಲ್ಲಿ 2010 ನೇ ಸಾಲಿನ ಲೆಕ್ಕ ಪರಿಶೋಧನೆಯ ವ್ಯತ್ಯಾಸದ ಬಗ್ಗೆ ತಿಳಿಸಿರುವುದಿಲ್ಲ. ನಮ್ಮ ಇಲಾಖೆಯ ಮೇಲಾಧಿಕಾರಿಗಳನ್ನು ಉಳಿಸಲು ಆರೋಪಿಗಳ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಖಾತೆದಾರರೇ ಪಾಸ್ ಪುಸ್ತಕ ಮತ್ತು ಹಣ ಬಿಡಿಸಿಕೊಳ್ಳುವ ಅರ್ಜಿಯನ್ನು ನೀಡಬೇಕು. ಖಾತೆಯಲ್ಲಿ ಶೀಲ್ಕ ಇಲ್ಲದೇ ಇದ್ದರೇ ಹಣ ಪಾವತಿ ಮಾಡಬೇಕೆಂದು ನಿಯಮ ಇದೆ ಎಂದರೆ ಸರಿಯಲ್ಲ. Training Module on NREGA wage payment through Post Officeses ನಮ್ಮ ಇಲಾಖೆಯಿಂದ ನೀಡಲಾದ ನಿಯಮಾವಾಳಿಗಳ ಪುಸ್ತಕ ಎಂದರೆ ಸರಿ. ಸ್ಪೇಸಿಮೆನ್ ಸಿಗ್ನೇಚರ್ ಪುಸ್ತಕದಲ್ಲಿ ಸಹಿ ಇರುತ್ತದೆ. ಸದರಿ ಪುಸ್ತಕವು ಸಂಬಂಧಿಸಿದದ ಉಪ ಅಂಚೇ ಕಚೇರಿ ಮತ್ತು ಶಾಖಾ ಅಂಚೆ ಕಚೇರಿಯಲ್ಲಿ ಇರುತ್ತದೆ. ಖಾತೆ ತೆರೆದ ಆರ್ಜಿ ಮಾತ್ರ ಮುಖ್ಯ ಅಂಚೇ ಕಚೇರಿಯಲ್ಲಿ ಇರುತ್ತದೆ. ಸದರಿ ದಾಖಲೆಗಳನ್ನು ತನಿಖಾಧಿಕಾರಿಗೆ

ನೀಡಿದ ಬಗ್ಗೆ ನನಗೆ ನೆನಪಿಲ್ಲ. ವೇಜ್ ಸ್ಲಿಪ್ ನ್ನು ನೋಡಿ ಹಣ ಸಂದಾಯ ಮಾಡಲಾಗುತ್ತದೆ ಎಂದರೆ ಸರಿಯಲ್ಲ. ಸದರಿ ದಾಖಲೆಯನ್ನು ಮುಖ್ಯ ಕಚೇರಿಯಲ್ಲಿ ಮಾತ್ರ ನೋಡಲಾಗುತ್ತದೆ ಎಂದರೆ ಸರಿ. ಜಿಲ್ಲಾ ಮುಖ್ಯ ಆಡಳಿತಾಧಿಕಾರಿಗಳು ಜಿಲ್ಲಾ ಮುಖ್ಯ ಅಂಚೆ ಕಚೇರಿಗೆ ವೇಜ್ ಸ್ಲಿಪ್ ನ್ನು ನೀಡುತ್ತಾರೆ. ಸದರಿ ಮುಖ್ಯ ಆಡಳಿತಾಧಿಕಾರಿಗಳು ನೀಡಿದ ವರದಿಯ ಪ್ರಕಾರ ಹಣ ಬಿಡುಗಡೆ ಮಾಡಲಾಗುತ್ತದೆ ಎಂದರೆ ಸರಿ. ಚಾಸಾ 4 ರಿಂದ 12 ರವರ ವೇಜ್ ಸ್ಲಿಪ್ ಗಳನ್ನು ನಾನು ನೋಡಿರುವುದಿಲ್ಲ. ಸದರಿ ದಾಖಲೆಗಳು ಇಂದಿಗೂ ನಮ್ಮ ಕಚೇರಿಯಲ್ಲಿ ಇರುವ ಬಗ್ಗೆ ನನಗೆ ಗೊತ್ತಿಲ್ಲ.

7. 2 ನೇ ಆರೋಪಿಯು ಶೀಲ್ಕಿಗಿಂತ ಜಾಸ್ತಿ ಹಣವನ್ನು ಬಟಾವಣೆ ಮಾಡಿರುವ ವಿಷಯ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ಸದರಿ ಆರೋಪಿಯು ಸದರಿ ಹಣವನ್ನು ತನ್ನ ಸ್ವಂತ ಉಪಯೋಗಕ್ಕೆ ಬಳಸಿಕೊಂಡಿರುವ ವಿಷಯ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ಅಮೂಲಕ ಆರೋಪಿ ನಮ್ಮ ಇಲಾಖೆಗೆ 1,06,600/- ರೂ. ಹಣವನ್ನು ನಷ್ಟ ಮಾಡಿರುವ ವಿಷಯ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. 2 ನೇ ಆರೋಪಿಯು ಯಾವುದೇ ಅಫರಾದ ಮಾಡಿಲ್ಲ ಎಂದರೆ ಸರಿಯಲ್ಲ.

1 ನೇ ಆರೋಪಿ ಪರ ವಕೀಲರು ಈ ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿದ್ದು ಹೆಚ್ಚುವರಿಯಾಗಿ ಈ ಕೆಳಕಂಡ ಪಾಟೀ ಸವಾಲನ್ನು ಮಾಡಿರುತ್ತಾರೆ.

<u>ಪಾಟೀ ಸವಾಲು 1 ನೇ ಆರೋಪಿ ಪರ ವಕೀಲರಿಂದಃ</u>

ನಿಪಿ 3 ರಲ್ಲಿ ಹೇಳಿರುವಂತೆ ಅಂಚೇ ಪಾಲಕರು ಮತ್ತು ಅಂಚೆ ಅಧೀಕ್ಷಕರು ಶೀಲ್ಕಿಗಿಂತ ಜಾಸ್ತಿ ಹಣವನ್ನು ಬಟವಾಣೆ ಮಾಡಿರುವ ಬಗ್ಗೆ ನೀಡಿದ ವರದಿಯನ್ನು ತನಿಖಾಧಿಕಾರಿಗೆ ನೀಡಿರುವುದಿಲ್ಲ. ಸದರಿ ವರದಿಯನ್ನು ನಾನು ನೇೂಡಿರುತ್ತೇನೆ. ಸದರಿ ವರದಿಯಲ್ಲಿ ಎಷ್ಟು ಹಣವನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆಂದು ಈಗ ನನಗೆ ನೆನಪಿಲ್ಲ. ಸದರಿ ವರದಿಯು 2010 ರಿಂದ 2014 ನೇ ಸಾಲಿನ

ವ್ಯೆಹಿವಾಟಿನ ಕುರಿತು ಇರುತ್ತದೆ. ಫಲಾನುಭವಿಗಳು ಪಾಸ್ ಪುಸ್ತಕವನ್ನು ಹಲವಾಗಲಿ ಗ್ರಾಮದ ಅಂಚೇ ಕಚೇರಿಯಿಂದ ನೀಡಿರುವುದಿಲ್ಲ ಎಂದು ಯಾವುದೇ ದೂರನ್ನು ನೀಡಿರುವುದಿಲ್ಲ. ಸದರಿ ವರದಿಯಲ್ಲಿ ಅಳವಂಡಿ ಉಪ ಅಂಚೇ ಕಚೇರಿಯ ವ್ಯಾಪ್ತಿಯ ಕಚೇರಿಗಳಲ್ಲಿ ಶೀಲ್ಕ ವ್ಯತ್ಯಾಸವಾಗಿರುವ ಕುರಿತು ವರದಿ ಬಂದಿರುತ್ತದೆ.

**2.** ನಾವು ಎಲ್ಲಾ ಅಂಚೇ ಕಚೇರಿಗಳ ವ್ಯೆಹಿವಾಟನ್ನು ಪರೀಕ್ಷಿಸಿದ್ದು ಹಲವಾಗಲಿ ಮತ್ತು ಕವಲೂರು ಅಂಚೇ ಇಲಾಖೆಯಲ್ಲಿ ಮಾತ್ರ ವ್ಯತ್ಯಾಸ ಬಂದಿರುತ್ತದೆ. ವಿತ್ ಡ್ರಾ ಫಾರಂ ಗಳನ್ನು ಅದೇ ದಿನ ಉಪ ಅಂಚೆ ಕಚೇರಿಗೆ ಕಳುಹಿಸಲಾಗುತ್ತದೆ. ನಂತರ ಅಲ್ಲಿಂದ ಮುಖ್ಯ ಅಂಚೇ ಕಚೇರಿಗೆ ಕಳುಹಿಸಲಾಗುತ್ತದೆ. ಹಲವಾಗಲಿ ಅಂಚೇ ಕಚೇರಿಯ ಎಷ್ಟು ಖಾತೆಗಳನ್ನು ನಾನು ಪರೀಕ್ಷಿಸಿರುತ್ತೇನೆ ಎಂದು ನೆನಪಿಲ್ಲ. ಎನ್ ಆರ್ ಇ ಜಿ ಯೋಜನೆಯು ಪ್ರಾರಂಭವಾದ ವರ್ಷ ನೆನಪಿಲ್ಲ. ಹಲವಾಗಲಿ ಅಂಚೇ ಇಲಾಖೆಯ **3** ರಿಂದ **4** ಫಲಾನುಭವಿಗಳನ್ನು ವಿಚಾರಿಸಿರುತ್ತೇವೆ. ಕೆಸಲಾಪೂರದಲ್ಲಿ ನಾನು ಯಾರನ್ನು ವಿಚಾರಿಸಿರುವುದಿಲ್ಲ. ಸದರಿ ವಿಚಾರಣೆಯ ಸಮಯದಲ್ಲಿ ನಾನು ಅಕೌಂಟ್ ಸ್ಟೇಟ್ ಮೆಂಟ್ ದಾಖಲೆಯನ್ನು ತೆಗೆದುಕೊಂಡು ಹೋಗಿದ್ದೇನು. ಸದರಿ ಭೇಟಿಯ ಸಮಯದಲ್ಲಿ ಖಾತಾ ಪುಸ್ತಕಗಳು ಸರಿಯಾಗಿವೆ ಎಂದು ನಮಗೆ ಯಾರು ತಿಳಿಸಿರುವುದಿಲ್ಲ.

**3.** ರೂ. **1,06,600/-** ಹಣವು ಅಂಚೇ ಕಚೇರಿಗೆ ಸಂಬಂಧಿಸಿದ ಹಣವಾಗಿದ್ದು ಫಲಾನುಭವಿಗಳಿಗೆ ಸದರಿ ಹಣದ ಬಗ್ಗೆ ಯಾವುದೇ ಅಧಿಕಾರ ಇರಲಿಲ್ಲ. ಚಾಸಾ **4** ರಿಂದ **12** ರ ಖಾತೆಗಳಿಗೆ ತಲಾ **8,200/-** ಮತ್ತು ಒಂದು ಖಾತೆಗೆ **16,400/-** ಹೆಚ್ಚುವರಿಯಾಗಿ ಜಮಾವಾಗಿರುತ್ತದೆ. ನಿಪಿ-**3** ನ್ನು ನೀಡುವ ಪೂರ್ವದಲ್ಲಿ ಮೇಲಾಧಿಕಾರಿಗಳಿಗೆ ಸದರಿ ದೂರನ್ನು ತೋರಿಸಿರುವುದಿಲ್ಲ.

**(ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಗಿದೆ).**

(ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ

**ಹೆ. ಜೆ ಎಂ ಎಫ್ ಸಿ ಕೊಪ್ಪಳ.**